**<u>ಸಾಕ್ಷಿಯನ್ನು ದಿನಾಂಕಃ 07-03-2026 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ ವಾದಿ ಸ್ವತಃ</u>**

1. ನಾನು 17.07.2025 ರಿಂದ ನಗರಸಬೆಯಲ್ಲಿ ಮುಖ್ಯಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದೇನೆ. ನಾನು ವಾದ ಪತ್ರದಲ್ಲಿರುವ ವಿಚಾರಗಳನ್ನು ತಿಳಿದುಕೊಂಡಿದ್ದೇನೆ. ರಸ್ತೆಯನ್ನು ಅತಿಕ್ರಮಣ ಮಾಡಲಾಗಿದೆ ಈ ದಾವೆಯನ್ನು ವಾದಿ ಸಲ್ಲಿಸಿರುವರು. ನಿಪಿ 4 ರಲ್ಲಿ ಪುರಸಬೆಯು ಮುಖ್ಯಾಧಿಕಾರಿಯವರ ಸಹಿ ಇರುತ್ತದೆ ಅಂದರೆ ಸರಿ. ವಿವಾದಿತ ಜಾಗವು ಭೂಪರಿವರ್ತನ ಆದ ಜಾಗ ಆಗಿರುತ್ತದೆ ಅಂದರೆ ಸರಿ. ನನಗೆ ದಾವಾ ಸ್ವತ್ತಿನ ಸರ್ವೆ ನಂಬರು ನೆನಪಿರುವುದಿಲ್ಲ.

2. ಭೂಪರಿವರ್ತನೆ ಆದ ಸ್ಥಳದಲ್ಲಿ ಎಷ್ಟು ಪಾಟುಗಳು ಇವೆ ಎಂದು ನನಗೆ ಗೊತ್ತಿಲ್ಲ. ರಸ್ತೆಯ ಪೂರ್ವ ದಿಕ್ಕಿಗೆ ವಾದಿಯ ಸೈಟು ಇರುವುದು. ನನಗೆ ವಾದಿಯ ಸೈಟಿನ ನಂಬರು ಗೊತ್ತಿರುವುದಿಲ್ಲ. ರಸ್ತೆಯನ್ನು ಅಂದಾಜು 15 ವರ್ಷಗಳ ಹಿಂದೆ ಮಾಡಿರಬಹುದು. ನಾನು ಆ ರಸ್ತೆಯನ್ನು ನೋಡಿದ್ದೇನೆ.

ನಾನು ಅಧಿಕಾರ ವಹಿಸಿಕೊಂಡ ನಂತರ ಆ ರಸ್ತೆಯನ್ನು ಅಳತೆ ಮಾಡಿರುವುದಿಲ್ಲ. ಆ ರಸ್ತೆಯ ಎಷ್ಟು ಅಗಲ ಇದೆ ಎಂದು ಕಡತವನ್ನು ನೋಡದೇ ನನಗೆ ಹೇಳಲಾಗುವುದಿಲ್ಲ. ನಿಪಿ 4 ರಲ್ಲಿ ಸದರಿ ರಸ್ತೆಯ ಅಗಲ 30 ಅಡಿ ಎಂದು ಉಲ್ಲೇಕ ಇದೆ ಅಂದರೆ ಸರಿ. ರಸ್ತೆಯ ಸುತ್ತ ಮುತ್ತ ಎಷ್ಟು ಪ್ಲಾಟುಗಳು ಇವೆ ಎಂದು ನನಗೆ ಹೇಳಲಾಗುವುದಿಲ್ಲ.

3. ಈಗಲೂಕೂಡ ಸದರಿ ರಸ್ತೆಯು 30 ಅಡಿ ಅಗಲ ಇರುವುದು. ಅಲ್ಲಿ ಇರುವ ಚರಂಡಿಯ ಪರಿಸ್ತಿತಿಯನ್ನು ನಾನು ನೋಡಿದ್ದೇನೆ. ಆ ಚರಂಡಿಯಲ್ಲಿ ಈಗ ಸರಿಯಾಗಿ ನೀರು ಹರಿಯುತ್ತಿದೆ. ಚರಂಡಿಯು ಎನ್ ಎ ಆಗಿರುವ ಎಲ್ಲಾ ಪ್ಲಾಟುಗಳಿಗೂ ಉತ್ತರದಿಂದ ದಕ್ಷಿಣದ ಕಡೆಗೆ ಹೋಗಿರುತ್ತದೆ. ಎನ್ ಎ ಆದ ಜಾಗದ ಯಾವ ದಿಕ್ಕಿಗೆ ಹಳ್ಳ ಇದೆ ಎಂದು ನನಗೆ ಗೊತ್ತಿಲ್ಲ. ರಸ್ತೆಯ ಪಶ್ಚಿಮಕ್ಕೆ ಮೂಲಬೂತ ಸೌಕರ್ಯಕ್ಕೆ ಇರಿಸಲಾದ ಜಾಗ ಇರುತ್ತದೆ. ಮೂಲಬೂತ ಸೌಕರ್ಯ ಅಂದರೆ ಸಾರ್ವಜನಿಕರಿಗೆ ಉಪಯೋಗವಾಗುವಂತೆ ಸೌಕರ್ಯ. ನಿರ್ದಿಷ್ಟವಾಗಿ ಯಾವ ಉದ್ದೇಶಕ್ಕೆ ಆ ಜಾಗವನ್ನ ಕಾಯ್ದಿರಸಲಾಗಿದೆ ಎಂದು ನನಗೆ ಗೊತ್ತಿಲ್ಲ.

**ಸಾಕ್ಷಿಯ ಸಹಿ** 07.03.2026

4. ರಸ್ತೆಯ ಪಶ್ಚಿಮಕ್ಕೆ ಸಮುದಾಯ ಭವನ ಇದೆ ಅಂದರೆ ಸರಿ. ನಮ್ಮ ನಿಯಮಾವಳಿಗಳ ಪ್ರಕಾರ ಭೂಪರಿವರ್ತನ ಆದ ನಂತರ ಯಾವ ಉದ್ದೇಶಕ್ಕೆ ಕಾಯ್ದಿರಸಲಾಗಿದೆಯೋ ಅ ಉದ್ದೇಶವನ್ನು ಹೊರತು ಪಡಿಸಿ ಸಮೂದಯ ಭವನ ಕಟ್ಟಿಸಲು ಅವಕಾಶ ಇರುತ್ತದೆ. ಸಾಕ್ಷಿ ಮುಂದುವರೆದು ಅದು ಸಾರ್ವಜನಿಕ ಉದ್ದೇಶಕ್ಕೆ ಕಟ್ಟಿಸಿರುವುದರಿಂದ ಅದು ಕಾನೂನು ಬದ್ಧವಾಗಿರುತ್ತದೆ ಎಂದು ನುಡಿದರು.

5. ಅಲ್ಲಿ ಇರುವ ಸಮೂದಯಭವನದ ಬಗ್ಗೆ ಕಡತಗಳು ನಮ್ಮ ಕಚೇರಿಯಲ್ಲಿ ಲಭ್ಯ ಇರುತ್ತವೆ. ಚರಂಡಿ ನಿರ್ಮಾಣ ಕಾರ್ಯ ಆದಾಗ ಅದು ಕಾನೂನು ಬಾಹೀರವಾಗಿರುತ್ತದೆ ಎಂದು ವಾದಿಯು ಪುರಸಬೆಗೆ ಅರ್ಜಿ ಕೊಟ್ಟಿರುವರು ಅಂದರೆ ಸರಿ ಅದನ್ನು ನಾನು ನೋಡಿರುತ್ತೇನೆ. ಸಾರ್ವಜನಿಕರಿಂದ ಅರ್ಜಿ ಬಂದರೆ ಅದರ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂಬ ನಿಯಮ ಇದೆ ಅಂದರೆ ಸರಿ. ಸಾಕ್ಷಿಯು ಮುಂದುವರೆದು ಅರ್ಜಿ ಅಸಮರ್ಪಕವಾದ ಕಾರಣ ಆ ಬಗ್ಗೆ ಪುರಸಬೆ ಕ್ರಮ ಕೈಗೊಂಡಿರುವುದಿಲ್ಲ ಎಂದು ನುಡಿದರು. ವಾದಿಯು ನೀಡಿದ ಅರ್ಜಿಯ ಪ್ರತಿಯನ್ನು ಡಿಸಿ ಕಚೇರಿಗೆ

ಕಳುಹಿಸಲಾಗಿದ್ದು ಅಲ್ಲಿಂದ ಪುರಸಬೆಗೆ ರವಾನಿಗೆ ಆಗಿರುತ್ತದೆ ಅಂದರೆ ಸರಿ. ಡಿಸಿ ಅವರು ನಿಯಾಮಳಿ ಪ್ರಕಾರ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿದ್ದು ಅರ್ಜಿಯಲ್ಲಿ ಎಷ್ಟು ಎಕರೆ ಜಾಗ ಅತಿಕ್ರಮಣ ಆಗಿದೆ ಎಂದು ಉಲ್ಲೇಕ ಇರುವುದೇ ಇರುವ ಕಾರಣ ಅರ್ಜಿಯನ್ನು ಪುರಸಬೆ ಪುರಸ್ಕರಿಸಿರುವುದಿಲ್ಲ.

6. ಸದರಿ ಅರ್ಜಿಯು ಸಮರ್ಪಕವಾಗಿರುವುದಿಲ್ಲವೆಂದು ನಿಪಿ 3 ರಲ್ಲಿ ಉಲ್ಲೇಕ ಇರುವುದಿಲ್ಲ ಅಂದರೆ ಸರಿ. ನಾವು 30 ಅಡಿ ಜಾಗ ಬಿಟ್ಟು ಚರಂಡಿ ನಿರ್ಮಾಣ ಮಾಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾವು ಚರಂಡಿ ನಿರ್ಮಾಣ ಕಾರ್ಯವನ್ನು ಸರಿಯಾಗಿ ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ಸ್ವಚ್ಚತಾ ಕೆಲಸಕ್ಕೆ ವಾದಿ ಅನಗತ್ಯವಾಗಿ ಹಸ್ತಕ್ಷೇಪ ಮಾಡುತ್ತಿರುವವರು ಎಂದು ನನ್ನ ಪ್ರಮಾಣ ಪತ್ರದಲ್ಲಿ ನಾನು ಸುಳ್ಳು ಹೇಳಿರುತ್ತೇನೆ ಅಂದರೆ ಸರಿಯಲ್ಲ.

**(ಈ ಹಂತದಲ್ಲಿ ವಾದಿಯು ಮುಂದುವರೆದು ಪಾಟೀ ಸವಾಲಿಗೆ ಅವಕಾಶವನ್ನು ಕೇಳಿದರು. 10 ವರ್ಷ ಕ್ಕಿಂತ ಮೇಲ್ಪಟ್ಟ ಪ್ರಕರಣ ಆಗಿರುವಂರಿಂದಿ ಪಾಟೀ ಸವಾಲನ್ನು ಮುಗಿಸುವಂತೆ ನ್ಯಾಯಾಲಯುವು ಸೂಚಿಸಿದಾಗ ಇನ್ನೊಂದು**

ಮುದ್ದತ್ತಿಗೆ ಮುಗಿಸುವುದಾಗಿ ವಾದಿ ನುಡಿದರು. ಆಗ ನ್ಯಾಯಾಲಯವು ಹಳೆಯ ಪ್ರಕರಣ ಆಗಿರುವದರಿಂದ ಸೋಮವಾರಕ್ಕೆ ಮುಂದುಡುವುದಾಗಿ ಅಭಿಪ್ರಾಯ ವ್ಯಕ್ತ ಪಡಿಸಿದಾಗ ವಾದಿಯು ಇನ್ನು ಸೋಮವಾದಿಂದ 4 ದಿನಗಳ ಕಾಲ ಬೇರೆ ಪ್ರಕರಣಗಳು ಇರುವುದರಿಂದ ಹಾಜರಾಗಲು ಸಾಧ್ಯವಾಗುವುದಿಲ್ಲ ಎಂದು ನುಡಿದರು ಮತ್ತು ನ್ಯಾಯಾಲಯವು ಬೇಕಾದರೆ ಪಾಟೀ ಸವಾಲನ್ನು ಮೂಕ್ತಾಯಗೊಳಿಸಬಹುದು ಎಂದು ನುಡಿದರು. ಆದ್ದರಿಂದ ಪಾಟೀ ಸವಾಲನ್ನು ಮುಕ್ತಾಯಗೊಳಿಸಲಾಯಿತು. ಕಾರಣ 2010 ರ ಪ್ರಕರಣ ಆಗಿರುವುದರಿಂದ ಹೆಚ್ಚಿನ ಕಾಲವಕಾಶವನ್ನು ನೀಡಲು ಸಾಧ್ಯವಾಗಿರುವುದಿಲ್ಲ ಆದ್ದರಿಂದ ಪಾಟೀ ಸವಾಲನ್ನು ಮುಕ್ತಾಯಗೊಳಿಸಲಾಯಿತು.)

ಮರು ವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ.

07-03-2026
ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಹರಪನಹಳ್ಳಿ

ಸಾಕ್ಷಿಯ ಸಹಿ 07.03.2026